






ಭಾರತದಲ್ಲಿ ಮೈಕ್ರೊ ಬ್ಯಾಕ್ಟೀರಿಯಂ ಟಿಬಿ ರೋಗಾಣುವಿನಿಂದ ಶೇ.40ಕ್ಕಿಂತ ಹೆಚ್ಚು ಜನರು ಸೋಂಕಿಗೆ ಒಳಗಾಗಿದ್ದಾರೆ.

## ಕ್ಷಯ ಒಂದು ಸಾಮಾಜಿಕ ಕಾಯಿಲೆ

ಕ್ಷಯ ರೋಗ ಬರುವಲ್ಲಿ ಸಾಮಾಜಿಕ ನಿರ್ಧಾರಯಕಗಳು ಪ್ರಮುಖ ಪಾತ್ರ ವಹಿಸುತ್ತವೆ. ಇವುಗಳೆಂದರೆ ಬಡತನ, ಅಪೌಷ್ಟಿಕತೆ, ಆರ್ಥಿಕ ಅಸಮಾನತೆ, ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳು, ದುರ್ಬಲತೆ ಮತ್ತು ಅಪಾಯದ ಅಂಚಿನಲ್ಲಿರುವ ಜನ, ತ್ವರಿತ ನಗರೀಕರಣ ಮತ್ತು ಜನಸಂಖ್ಯೆಯ ಬೆಳವಣಿಗೆ, ಉದ್ಯೋಗ ಸಂಬಂಧಿತ ಅಂಶಗಳು.

## ಏಕಿದು ಸಾಮಾಜಿಕ ಸಮಸ್ಯೆ?

- ಬಡತನ ಮತ್ತು ಆಹಾರ ಅಭದ್ರತೆ
- ಅಪೌಷ್ಟಿಕತೆ ಮತ್ತು ಹಸಿವು
- ಕಳಪೆ ವಸತಿ ಮತ್ತು ಪರಿಸರ ಅಸಮತೋಲನ
- ಕಲುಷಿತ ಗಾಳಿ ಮತ್ತು ಜನದಟ್ಟಣೆ
- ಆರ್ಥಿಕ ಒತ್ತಡ
- ಆರೋಗ್ಯ ಸೇವೆ ಮತ್ತು ಸಾಂಸ್ಕೃತಿಕ ಅಡೆತಡೆಗಳು

ಈ ಸಾಮಾಜಿಕ ನಿರ್ಧಾರಗಳು ಕ್ಷಯದ ಪ್ರಮುಖ ಅಪಾಯಕಾರಿ ಅಂಶಗಳಲ್ಲಿ ಸೇರಿವೆ. ಮೇಲಿನ ಎಲ್ಲವೂ ಸೋಂಕಿತ ವ್ಯಕ್ತಿಯಲ್ಲಿ ಕ್ಷಯ ರೋಗಕ್ಕೆ ಒಳಗಾಗುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ಜೊತೆಗೆ ಸಕ್ರಿಯ ಕಾಯಿಲೆಯು ಹರಡುವ ಅಪಾಯವನ್ನು ಹೆಚ್ಚಿಸುತ್ತದೆ.

## ಕ್ಷಯರೋಗ ಯಾರನ್ನು ಬಾಧಿಸುತ್ತದೆ?

ಕ್ಷಯ ಯಾರಿಗೆ ಅಪಾಯಕಾರಿ ಎಂಬ ಪ್ರಶ್ನೆ ಸಹಜ.

- ಮಧುಮೇಹ ಇರುವವರಿಗೆ (ಮೂರು ಪಟ್ಟು ಹೆಚ್ಚು ಅಪಾಯ)
- ಎಚ್ಐವಿ ಸೋಂಕಿತರು (ಹತ್ತು ಪಟ್ಟು ಹೆಚ್ಚು ಅಪಾಯ)
- ಕ್ಯಾನ್ಸರ್ ಹೊಂದಿರುವವರು
- ಕಲುಷಿತ ಗಾಳಿ, ಬೆಳಕು ಇರುವ ಮನೆ, ಜಾಗಗಳಲ್ಲಿ ವಾಸ ಮಾಡುವವರನ್ನು
- ಜನಸಂದಣಿ ಇರುವ ಜಾಗಗಳಲ್ಲಿ ವಾಸ ಮತ್ತು ಕೆಲಸ ಮಾಡುವ ಜನರು

